# ಆಹಾ ಸುದ್ದಿ!

★ ಸಸಿತೋಟ

ಎಡಿನ್‌ಬರ್ಗ್ ಮೃಗಾಲಯದಲ್ಲಿರುವ ಚಿಂಪಾಂಜಿಗಳು ಕಳೆದ ಮೂರು ವರ್ಷಗಳಿಂದ ಒಂದೇ ಗುಂಪಿನಲ್ಲಿ ಇದ್ದುಕೊಂಡು ಒಂದೇ ರೀತಿಯ ಗುಟುರು ಹಾಕುವ ಕಲೆ ಸಿದ್ಧಿಸಿಕೊಂಡಿವೆಯಂತೆ. ಇದಕ್ಕಾಗಿ ದೊಡ್ಡ ಅಧ್ಯಯನವೇ ನಡೆದಿದೆ. ಅದರಲ್ಲೇನು ವಿಶೇಷ, ನಾವು ಕನ್ನಡಿಗರು ಅಕ್ಕಪಕ್ಕದವರ ಭಾಷೆ ಮಾತನಾಡುವುದನ್ನು ಸಿದ್ಧಿಸಿಕೊಂಡ ಹಾಗೆ ಇರಬಹುದು.



ಬಾರ್ಸೆಲೋನ ಫ್ಯಾಷನ್ ಶೋದಲ್ಲಿ ರೂಪದರ್ಶಿಗಳು ಕಾರ್ಡ್‌ಬೋರ್ಡ್ ಉಡುಪು ಧರಿಸಿ ಕ್ಯಾಟ್‌ವಾಕ್ ಮಾಡಿದರು. ಕಾರ್ಡ್‌ಬೋರ್ಡ್ ಬಹೂಪಯೋಗಿ. ಬಾಕ್ಸ್ ಮಾಡಿ ಎಂತೆಂತಹ ವಸ್ತುಗಳನ್ನು ತುರುಕುವುದರ ಬದಲು ಈಗ ಅಂದದ ಜೀವಂತ ಬೊಂಬೆಗಳನ್ನು ತುರುಕುತ್ತಿದ್ದಾರೆ.



ಅಟ್ಲಾಂಟಾದಲ್ಲಿ ಪೋಷಕರ ಮಾತು ಕೇಳದ ಗಂಡು ಮಕ್ಕಳಿಗೆ ಮುದುಕರ ಕೇಶ ವಿನ್ಯಾಸ ಮಾಡುವ ಕ್ಷೌರಿಕನಿದ್ದಾನಂತೆ. ರಸೆಲ್ ಫ್ರೆಡರಿಕ್ ಎಂಬಾತ ಶಾಲಾ ಹೋಂವರ್ಕ್ ಮಾಡದ ತನ್ನ ಮಗನನ್ನು ಶಿಕ್ಷಿಸಲು ಈ ರೀತಿ ಕೇಶ ವಿನ್ಯಾಸ ಮಾಡಿದ್ದೇ ಮಾಡಿದ್ದು ಆತನ ಕೇಶ ವಿನ್ಯಾಸ ಮಳಿಗೆಯ ಮುಂದೆ ತುಂಟ ಗಂಡು ಮಕ್ಕಳ ಪೋಷಕರು ಕ್ಯೂ ನಿಲ್ಲುತ್ತಿದ್ದಾರಂತೆ. ಹೀಗೂ ಇರಬಹುದು ಪ್ರಚಾರ ವೈಖರಿ.



ಜರ್ಮನಿಯ 91ರ ಅಜ್ಜಿ ಕ್ಯಾಥಿ 1939ರಿಂದ ಝುಮ್ ಗೋಲ್ಡನೆನ್ ತಾಲ್ ಎಂಬ ರೆಸ್ಟೋರೆಂಟ್‌ನಲ್ಲಿ ಪರಿಚಾರಕಿಯಾಗಿ ಕೆಲಸ ಮಾಡುತ್ತಿದ್ದಾಳಂತೆ. ಫ್ಯಾನ್ಸಿ ಉಡುಪುಗಳನ್ನು ಸಂಗ್ರಹಿಸುವ ಹವ್ಯಾಸ ಹೊಂದಿರುವ ಈ ಅಜ್ಜಿ 1977ರಿಂದ ಈಚೆಗೆ 81 ಸಾವಿರ ಕಿ.ಮೀ. ದೂರ ಹೆಜ್ಜೆ ಹಾಕಿ ನಡೆದಿದ್ದಾಳಂತೆ. ಎನರ್ಜಿ ಡ್ರಿಂಕ್ ಕುಡಿಯುವ ಹವ್ಯಾಸವಿಲ್ಲದ್ದಕ್ಕೆ ಈ ಎನರ್ಜಿ ಅಜ್ಜಿಯದು.



ದಕ್ಷಿಣ ಜಾರ್ಜಿಯಾದಲ್ಲಿ ಓಡಾಡುತ್ತಿದ್ದ ಈ ನಾಯಿಗೆ ಪಿಟ್‌ಬುಲ್ ಮುಖ, ಡ್ಯಾಷ್‌ಹೌಂಡ್ ದೇಹ. ರಾಮಿ ಎಂಬ ಈ ನಾಯಿ ಆಕಸ್ಮಿಕವಾಗಿ ಮಿಶ್ರ ತಳಿಯಾಗಿ ಹುಟ್ಟಿದ್ದೇ ಅಥವಾ ಯಾರೋ ಕಿಡಿಗೇಡಿಗಳು ಪ್ರಯೋಗ ಮಾಡಿದ್ದೇ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆಯಂತೆ. ಇಷ್ಟು ದಿನ ಫೋಟೋಷಾಪ್‌ನಲ್ಲಿ ಕಿಡಿಗೇಡಿತನ ನಡೆಯುತ್ತಿತ್ತು, ಈಗ ನೈಸರ್ಗಿಕ ಕ್ರಿಯೆಯಲ್ಲೂ ಇಂಥವರ ಕೈವಾಡ ನಡೆಯುತ್ತಿದೆ.

ಆಗ್ರಾದಲ್ಲಿ ಮದುವೆ ಛತ್ರದಲ್ಲಿ ಮಂಗಗಳ ಕಾಟ ಎಷ್ಟಿದೆಯೆಂದರೆ ಅವುಗಳನ್ನು ಓಡಿಸಲು ದೊಡ್ಡ ಗಾತ್ರದ ಸಿಂಹಬಾಲದ ಮಂಗಗಳನ್ನು ಬಾಡಿಗೆ ನೀಡುವ ಹೊಸ ಉದ್ಯಮ ಶುರುವಾಗಿದೆಯಂತೆ. ಛತ್ರದಲ್ಲಿ ಕೀಟಲೆ ಮಾಡಿ, ಗಡಿಬಿಡಿ ಎಬ್ಬಿಸುವ ಈ ಮಂಗಗಳನ್ನು ಓಡಿಸಲು ಸಿಂಹಬಾಲದ ಮಂಗಗಳು ದಿನವೊಂದಕ್ಕೆ 3 ಸಾವಿರದಿಂದ 10 ಸಾವಿರ ರೂಪಾಯಿವರೆಗೆ ಶುಲ್ಕ ವಿಧಿಸುತ್ತವಂತೆ. ಮದುವೆ ನಿರ್ವಹಣೆ ಮಾಡುವ ಕಂಪೆನಿಗಳು ಖರ್ಚಿನ ಪಟ್ಟಿ ಕೊಡುವಾಗ ಸೆಕ್ಯುರಿಟಿ ಮಂಗನ ಬಾಡಿಗೆಯನ್ನೂ ಸೇರಿಸಬಹುದು.